


# ಅಮೂಲ್ಯ ಕಾಣಿಕೆ

■ ನಾಗೇಂದ್ರ ಚಕ್ರಗಿರಿ
ಕಲೆ: ಶ್ರೀಕೃಷ್ಣ ಕೆದಿಲಾಯ

ಒಂದು ಸುಂದರವಾದ ಅರಣ್ಯದಲ್ಲಿ ಒಂದು ಗುರುಕುಲವಿತ್ತು. ಅಲ್ಲಿಯ ಗುರುಗಳು ತಪಸ್ವಿಗಳೂ ಜ್ಞಾನಿಗಳೂ ಆಗಿದ್ದರು. ಬಡವ ಬಲ್ಲಿದರೆಂಬ ತಾರತಮ್ಯವಿಲ್ಲದೆ ಎಲ್ಲ ವಿದ್ಯಾರ್ಥಿಗಳನ್ನೂ ಸಮಾನವಾಗಿ ನೋಡುತ್ತ ವಿದ್ಯಾದಾನ ಮಾಡುತ್ತಿದ್ದರು.

ಆ ಗುರುಕುಲದಲ್ಲಿ ರಾಘವನೆಂಬ ಶ್ರೀಮಂತನ ಮಗ ಮತ್ತು ಕೇಶವನೆಂಬ ಬಡವನ ಮಗ ವಿದ್ಯಾರ್ಥಿಗಳಾಗಿದ್ದು, ಇಬ್ಬರೂ ಆಪ್ತ ಮಿತ್ರರಾಗಿದ್ದರು. ರಾಘವ ಮತ್ತು ಕೇಶವ ಇಬ್ಬರೂ ವಿದ್ಯಾರ್ಜನೆಯಲ್ಲಿ, ಗುರುಗಳ ಸೇವೆಯಲ್ಲಿ, ಆಶ್ರಮದ ಕೆಲಸ ಕಾರ್ಯಗಳಲ್ಲಿ ತಮ್ಮ ನಿಷ್ಠೆ, ಶ್ರದ್ಧೆ, ಭಕ್ತಿ, ಬುದ್ಧಿಶಕ್ತಿಗಳಿಂದ ಗುರುಗಳ ಪ್ರೀತಿ, ವಿಶ್ವಾಸ ಗಳಿಸಿದ್ದರು.

ಒಮ್ಮೆ ಗುರುಗಳಿಗೆ ತಮ್ಮ ಶಿಷ್ಯರನ್ನು ಪರೀಕ್ಷಿಸುವ ಮನಸ್ಸಾಯಿತು. ಎಲ್ಲ ವಿದ್ಯಾರ್ಥಿಗಳನ್ನೂ ಕರೆದು ತಮಗೆ ವಿದ್ಯಾರ್ಥಿಗಳೆಲ್ಲರೂ ಅಮೂಲ್ಯವಾದ ಉಡುಗೊರೆಗಳನ್ನು ನೀಡಬೇಕೆಂದು ತಿಳಿಸಿದರು. ವಿದ್ಯಾರ್ಥಿಗಳೆಲ್ಲಾ ತಮ್ಮ ಕೈಲಾದ ಅಮೂಲ್ಯವಾದ ವಸ್ತುಗಳನ್ನು ತಮ್ಮ ತಂದೆ ತಾಯಿಗಳಿಂದ ಪಡೆದು ಗುರುಗಳಿಗೆ ಅರ್ಪಿಸುತ್ತಿದ್ದರು.

ಕೇಶವನಿಗೂ ಗುರುಗಳಿಗೆ ಏನಾದರೂ ಬೆಲೆಬಾಳುವ ವಸ್ತುವನ್ನು ಕಾಣಿಕೆಯಾಗಿ ಕೊಡುವ ಮನಸ್ಸಾಯಿತು. ಆದರೆ ಅವನ ತಂದೆ ತಾಯಿ ಬಡವರು. ಒಂದು ಹೊತ್ತಿನ ಊಟಕ್ಕೂ ಪರದಾಡುವಂತಹವರು. ಮಗ ಗುರುಕುಲದಲ್ಲಿ ಹೊಟ್ಟೆಗೆ, ಬಟ್ಟೆಗೆ ಬರವಿಲ್ಲದೆ ವಿದ್ಯಾರ್ಜನೆ ಮಾಡುತ್ತಿದ್ದುದೇ ಅವರಿಗೆ ಮಹಾ ಭಾಗ್ಯವೆನ್ನುವಂತಿತ್ತು. ಅವನ ತಂದೆ ಕಾಡು ಮೇಡುಗಳಲ್ಲಿ ಅಲೆದು, ಅರಣ್ಯ ಉತ್ಪನ್ನಗಳನ್ನು ಆರಿಸಿ ತಂದು ಮಾರಿ ತನ್ನ ಹಾಗೂ ಹೆಂಡತಿಯ ಹೊಟ್ಟೆ ಹೊರೆಯುತ್ತಿದ್ದ. ಇಂತಹವರು ಗುರುಗಳಿಗೆ ಬೆಲೆ ಬಾಳುವಂತಹ ಕಾಣಿಕೆಯನ್ನು ಹೇಗೆ ತಾನೆ ಕೊಟ್ಟಾರು? ತಂದೆ ತಾಯಿ ಪರಿಸ್ಥಿತಿ ಅರಿತಿದ್ದ ಮಗ ಅವರಿಂದ ಏನನ್ನೂ ಕೇಳುವ ಮನಸ್ಸು ಮಾಡಲಿಲ್ಲ. ಆದರೆ ಗುರುಗಳಿಗೆ ಒಳ್ಳೆಯ ಕಾಣಿಕೆ ಕೊಡುವ ಆಸೆ ಮಾತ್ರ ಅವನ ಮನಸ್ಸಿನಲ್ಲಿ ಗಟ್ಟಿಯಾಗಿತ್ತು. ಇದರ ಬಗ್ಗೆಯೇ ಯೋಚಿಸಿ ಕೊನೆಗೆ ತನ್ನ ಆಪ್ತ ಮಿತ್ರ ರಾಘವನಿಂದ ಸಹಾಯ ಕೇಳಲು ನಿಶ್ಚಯಿಸಿ ಅವನನ್ನು 'ರಾಘವ, ಎಲ್ಲರಂತೆ ನಾನೂ ಗುರುಗಳಿಗೆ ಒಳ್ಳೆಯ ಕಾಣಿಕೆ ಕೊಡಲು ಆಸೆಯಿಂದಿರುವೆ. ಆದರೆ ನನ್ನ ಬಡತನ ಇದಕ್ಕೆ ಅಡ್ಡಿಯಾಗಿದೆ. ನಿನ್ನಿಂದ ನಾನು ಹಣದ ಸಹಾಯ ಅಪೇಕ್ಷಿಸುತ್ತಿದ್ದೇನೆ, ನನಗೆ ಸಹಾಯ ಮಾಡುವೆಯಾ?' ಎಂದು ಕೇಳಿದನು. ರಾಘವ ತನಗೆ ಒಂದು ದಿನ ಸಮಯ ನೀಡುವಂತೆ ಕೇಳಿದ. ಕೇಶವ ಆಗಲಿ ಎಂದ.

ಮಾರನೇ ದಿನ ಕೇಶವ ಆಸೆ ಕಣ್ಣುಗಳಿಂದ ರಾಘವನ ಮುಖವನ್ನೇ ನೊಡಿದ. ರಾಘವ 'ಕೇಶವ, ನಿನ್ನ ಕೋರಿಕೆಯ ಬಗ್ಗೆ ಯೋಚಿಸಿದೆ. ನಿನಗೆ ಹಣ ಕೊಡಲು ಕೆಲವು ಅಡಚಣೆಗಳಿವೆ. ಮೊದಲನೆಯದು ನಾನು ಆರ್ಥಿಕವಾಗಿ ಸ್ವತಂತ್ರನಲ್ಲ. ನಿನಗೆ ಹಣ ಕೊಡಲು ನಾನು ನನ್ನ ತಂದೆಯನ್ನು ಕೇಳಬೇಕು. ಅವರು ಒಪ್ಪುವರೋ ಇಲ್ಲವೋ ಗೊತ್ತಿಲ್ಲ. ಎರಡನೆಯದು ನಾನು ನಿನಗೆ ಹಣ ಸಹಾಯ ಮಾಡಿದರೆ ನಮ್ಮಿಬ್ಬರಲ್ಲಿ ವ್ಯವಹಾರ ಏರ್ಪಡುತ್ತದೆ. ಅದು ನಮ್ಮ ಸ್ನೇಹಕ್ಕೆ ಧಕ್ಕೆ ಉಂಟು ಮಾಡಬಹುದು. ನನಗೆ ಗರ್ವ ಬರಬಹುದು. ನಿನ್ನಲ್ಲಿ ದೈನ್ಯತೆಯ ಭಾವ ಮೂಡಬಹುದು. ನಾವಿಬ್ಬರೂ ಇಷ್ಟೇ ಆತ್ಮೀಯರಾಗಿ ಮುಂದುವರೆಯಲು ಸಾಧ್ಯವಾಗದಿರಬಹುದು. ಮತ್ತೊಂದು ಕಾರಣ ನಿನ್ನಿಂದ ಸರಿಯಾದ ಪ್ರಯತ್ನವಿಲ್ಲದೇ, ಇನ್ನೊಬ್ಬರ ಹಣದಿಂದ ಕೊಡುವ ಕಾಣಿಕೆ ಅಮೂಲ್ಯ ಎನಿಸದು. ಗುರುಗಳಿಗೆ ಅದು ಇಷ್ಟವಾಗದೇ ಹೋಗಬಹುದು. ನಾನೂ ನನ್ನ ತಂದೆ ತಾಯಿಗಳ ನೆರವಿಲ್ಲದೇ, ಸ್ವಪ್ರಯತ್ನದಿಂದ ಕಾಡಿನಲ್ಲಿ ಸೌದೆ, ಹಣ್ಣು, ಹಂಪಲು ಮೊದಲಾದವುಗಳನ್ನು ಸಂಗ್ರಹಿಸಿ ಮಾರಿ ಬಂದ ಹಣದಿಂದ ಒಂದು ಸಣ್ಣ ವಸ್ತುವನ್ನಷ್ಟೇ ಖರೀದಿಸಿ ಗುರುಗಳಿಗೆ ಸಮರ್ಪಿಸಿದ್ದೇನೆ. ನೀನೂ ಸಹ ಸ್ವಪ್ರಯತ್ನದಿಂದ, ಹಣ ಗಳಿಸಿ ಕಾಣಿಕೆ ನೀಡಬೇಕು' ಎಂದ.

ಕೇಶವನಿಗೆ ನಿರಾಸೆಯಾಯಿತು. ಕೋಪವೂ ಬಂತು. ಬೇಸರದಿಂದ ದುರದುರನೆ ಅಲ್ಲಿಂದ ಹೊರಟುಹೋದ. ಇದನ್ನೆಲ್ಲಾ ಗಮನಿಸುತ್ತಿದ್ದ ಗುರುಗಳಿಗೆ ರಾಘವನ ಬಗ್ಗೆ ಹೆಮ್ಮೆಯೆನಿಸಿ, ಇಬ್ಬರನ್ನೂ ತಮ್ಮ ಬಳಿಗೆ ಕರೆಸಿ ಕೇಶವನನ್ನು ಕುರಿತು 'ನೋಡು, ನನಗೆ ಯಾವುದೇ ಕಾಣಿಕೆಗಳಲ್ಲಿ ಆಸಕ್ತಿಯಿಲ್ಲ. ನಿಮ್ಮನ್ನೆಲ್ಲಾ ಪರೀಕ್ಷಿಸಲು ಈ ಕೋರಿಕೆಯಿಟ್ಟೆ ಅಷ್ಟೆ. ರಾಘವ ಈ ಪರೀಕ್ಷೆಯಲ್ಲಿ ಉತ್ತೀರ್ಣನಾದ. ಅವನ ಆಲೋಚನೆ, ನಿನಗೆ ನೀಡಿದ ಬುದ್ಧಿವಾದ ಎಲ್ಲ ಸರಿಯಾಗಿದೆ. ಶ್ರೀಮಂತ ತಂದೆ ತಾಯಿಗಳಿದ್ದರೂ ಅವರ ನೆರವು ಪಡೆಯದೆ ತನ್ನ ಸ್ವಂತ ದುಡಿಮೆಯಿಂದ ನನಗೆ ಕಾಣಿಕೆ ನೀಡಿದ್ದಾನೆ. ಅದರ ಬೆಲೆ ಎಷ್ಟೇ ಆದರೂ ಅದು ಅಮೂಲ್ಯವೇ. ನಿನ್ನ ಯೋಚನೆ ಬದಲಿಸಿಕೋ. ಎಲ್ಲರೂ ಏನೋ ಕೊಟ್ಟರೆಂದು ನೀನೂ ಅದನ್ನೇ ಮಾಡಬೇಕಿಲ್ಲ. ಸ್ವಂತ ಶ್ರಮದಿಂದ ಸಂಪಾದಿಸಿದ್ದು ಯಾವಾಗಲೂ ಶ್ರೇಷ್ಠ. ಬಡವನಾದರೂ ಪರರ ಹಣಕ್ಕೆ ಎಂದೂ ಆಸೆ ಪಡಬೇಡ' ಎಂದು ಬುದ್ಧಿವಾದ ಹೇಳಿ, ರಾಘವನನ್ನು ಹೊಗಳಿ ಅವನ ಬೆನ್ನು ತಟ್ಟಿದರು. ಕೇಶವನಿಗೆ ತನ್ನ ತಪ್ಪಿನ ಅರಿವಾಗಿ, ಗುರುಗಳಲ್ಲೂ, ಸ್ನೇಹಿತನಲ್ಲೂ ಕ್ಷಮಾಪಣೆ ಕೋರಿ, ಸ್ವಪ್ರಯತ್ನದಿಂದ ಗುರುಗಳ ಮನಸ್ಸು ಗೆಲ್ಲಲು ಪಣ ತೊಟ್ಟ.

■